KACM710029702022

**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.

ಉಪಸ್ಥಿತರು
ಶ್ರೀಮತಿ ಉರ್ಮಿಳ.ವಿ., ಬಿ.ಎ.ಎಲ್., ಎಲ್‌ಎಲ್‌ಬಿ.,
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

ದಿನಾಂಕ ಃ **15** ನೇ ಮೇ **2026**

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ **2200/2022**

ಫಿರ್ಯಾದಿ ಃ ರಾಜ್ಯದ ಪರವಾಗಿ ಲಕ್ಕವಳ್ಳಿ ಪೊಲೀಸರು

(ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿ ಅಭಿಯೋಜಕರು)

-ವಿರುದ್ಧ-

ಆರೋಪಿ/ತರು ಃ

ಅಶೋಕ.ಪಿ. ಬಿನ್ ಪರಶುರಾಮ, ವಯಸ್ಸು 24 ವರ್ಷ, ಬಡಗಿ ಕೆಲಸ, ವಾಸಃ ರಂಗೇನಹಳ್ಳಿ ಗ್ರಾಮ, ಲಕ್ಕವಳ್ಳಿ ಹೋಬಳಿ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ .

(ಪ್ರತಿನಿಧಿಸುವವರುಃ ಶ್ರೀ ಜೆ.ಟಿ.ಜಗದೀಶ್, ನ್ಯಾಯವಾದಿಗಳು.)

| | | |
|---|---|---|
| 1 | ಅಪರಾಧ ನಡೆದ ದಿನಾಂಕ | 16.05.2022 |
| 2 | ಅಪರಾಧ ವರದಿ ಮಾಡಿದ ದಿನಾಂಕ | 18.05.2022 |
| 3 | ಆರೋಪಿತರನ್ನು ಬಂಧಿಸಿದ ದಿನಾಂಕ | -- |
| 4 | ಫಿರ್ಯಾದಿಯ ಹೆಸರು | ಮಹೇಂದ್ರ |
| 5 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 30.06.2025 |
| 6 | ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 30.04.2026 |
| 7 | ಆರೋಪಿಸಲಾದ ಅಪರಾಧಗಳು | ಭಾ.ದ.ಸಂ.ಕಲಂ 279, 304(ಎ) |
| 8 | ನ್ಯಾಯಾಧೀಶರ ಅಭಿಪ್ರಾಯ | ಆರೋಪಿ ನಿರಪರಾಧಿ |

Visit **ecourts.gov.in** for updates or download mobile app "**eCourts Services**" from Android or iOS

<u>ತೀರ್ಪು</u>

ಪೊಲೀಸ್ ವೃತ್ತ ನಿರೀಕ್ಷಕರು, ತರೀಕೆರೆ ಗ್ರಾಮಾಂತರ ವೃತ್ತ, ಚಿಕ್ಕಮಗಳೂರು ಜಿಲ್ಲೆ ಇವರು ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 279 ಹಾಗೂ 304(ಎ) ರಡಿಯಲ್ಲಿ ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

2. <u>ಈ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆಃ-</u>

ದಿನಾಂಕ 16.05.2022 ರಂದು ಸಂಜೆ 05.45 ಗಂಟೆ ಸಮಯದಲ್ಲಿ ಲಕ್ಕವಳ್ಳಿ ಪೋಲೀಸ್ ಠಾಣಾ ಸರಹದ್ದಿನ ರಂಗೇನಹಳ್ಳಿ ಗ್ರಾಮದಲ್ಲಿ ಚಾಸಾ-1 ಮಹೇಂದ್ರರವರ ತಾಯಿಯಾದ ಪಾರ್ವತಮ್ಮರವರು ರಂಗೇನಹಳ್ಳಿ ಗ್ರಾಮದ ಬಳಿ ಹಾದು ಹೋಗಿರುವ ತರೀಕೆರೆ ಲಕ್ಕವಳ್ಳಿ ರಸ್ತೆಯನ್ನು ದಾಟುತ್ತಿರುವಾಗ, ಆರೋಪಿಯು ಬೈಕ್ ಸಂಖ್ಯೆ ಕೆಎಃ04/ಈಯು-3503 ನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಮಾನವ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಪಾರ್ವತಮ್ಮರವರಿಗೆ ಡಿಕ್ಕಿ ಹೊಡೆಸಿ ಅಪಘಾತ ಪಡಿಸಿದ ಪರಿಣಾಮ ಪಾರ್ವತಮ್ಮರವರು ರಸ್ತೆಯ ಮೇಲೆ ಬಿದ್ದು ಅವರ ತಲೆಗೆ ಕೈಕಾಲುಗಳಿಗೆ ಪೆಟ್ಟು ಬಿದ್ದು ತೀವ್ರ ಸ್ವರೂಪದ ರಕ್ತ ಗಾಯಗಳಾಗಿ, ಚಿಕಿತ್ಸೆ ಫಲಕಾರಿಯಾಗದೇ ದಿನಾಂಕ 23.05.2022 ರಂದು ರಾತ್ರಿ 08.10 ಗಂಟೆ ಸಮಯದಲ್ಲಿ ಮೃತಪಟ್ಟಿರುತ್ತಾರೆ. ಆದ್ದರಿಂದ ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

3. ಪ್ರಸ್ತುತ ಪ್ರಕರಣದಲ್ಲಿ ತನಿಖಾಧಿಕಾರಿಯು ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ನಂತರ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು. ಆರೋಪಿಯು ವಕೀಲರ ಮೂಲಕ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಆರೋಪಿಗೆ ಅಭಿಯೋಜನೆಯ ಎಲ್ಲಾ ದಸ್ತಾವೇಜುಗಳನ್ನು ಭಾರತೀಯ ದಂಡ ಪಕ್ರಿಯಾ ಸಂಹಿತೆ ಕಲಂ 207 ರ ಅನುಸಾರ ಒದಗಿಸಲಾಗಿರುತ್ತದೆ. ಆರೋಪಿಯ ವಿರುದ್ಧ ಭಾರತೀಯ ದಂಡ

Visit **ecourts.gov.in** for updates or download mobile app "**eCourts Services**" from Android or iOS

ಸಂಹಿತೆ ಕಲಂ 279 ಹಾಗೂ 304(ಎ) ರಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕಾಗಿ ಅಪಾದನೆಯನ್ನು ರಚಿಸಲಾಯಿತು. ಆರೋಪಿಯು ಸದರಿ ಅಪಾದನೆಯನ್ನು ನಿರಾಕರಿಸಿ ವಿಚಾರಣೆಯನ್ನು ಬಯಸಿರುತ್ತಾರೆ.

4. ಅಭಿಯೋಜನೆಯು ಸಾಕ್ಷಿದಾರರ ಪಟ್ಟಿಯಲ್ಲಿ ತೋರಿಸಿರುವ 21 ಸಾಕ್ಷಿದಾರರ ಪೈಕಿ ಅಸಾ-1 ರಿಂದ 10 ರವರ ಸಾಕ್ಷ್ಯ ಮಾಡಿಸಿರುತ್ತಾರೆ ಹಾಗೂ 12 ದಾಖಲೆಗಳನ್ನು ಹಾಜರುಪಡಿಸಿ ನಿಪಿ-1 ರಿಂದ 12 ಎಂದು ಗುರ್ತಿಸಿಕೊಂಡಿರುತ್ತಾರೆ.

5. ಅಭಿಯೋಜನೆ ಪರ ಸಾಕ್ಷಿದಾರರ ವಿಚಾರಣೆ ಮುಕ್ತಾಯಗೊಂಡ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆಯನ್ನು ದಾಖಲು ಮಾಡಿಕೊಳ್ಳಲಾಯಿತು. ಆರೋಪಿಯು ತನ್ನ ವಿರುದ್ಧದ ಹೇಳಿಕೆಗಳನ್ನು ಅಲ್ಲಗಳೆದಿರುತ್ತಾರೆ ಹಾಗೂ ಅವರ ಪರ ಯಾವುದೇ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿಕೊಂಡಿರುವುದಿಲ್ಲ ಮತ್ತು ಯಾವುದೇ ದಾಖಲಾತಿಗಳನ್ನು ಗುರ್ತಿಸಿಕೊಂಡಿರುವುದಿಲ್ಲ.

6. ಆರೋಪಿಯು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ನ್ನು ಪಾಲನೆ ಮಾಡಿರುತ್ತಾನೆ.

7. ಆರೋಪಿಯ ಪರ ಹಾಗೂ ಅಭಿಯೋಜಕರ ಪರ ವಾದ ಪ್ರತಿವಾದಗಳನ್ನು ಆಲಿಸಲಾಯಿತು.

8. ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿರುತ್ತದೆ ಃ

1) ದಿನಾಂಕ 16.05.2022 ರಂದು ಸಂಜೆ 05.45 ಗಂಟೆ ಸಮಯದಲ್ಲಿ ಲಕ್ಕವಳ್ಳಿ ಪೋಲೀಸ್ ಠಾಣಾ ಸರಹದ್ದಿನ ರಂಗೇನಹಳ್ಳಿ ಗ್ರಾಮದಲ್ಲಿ ಚಾಸಾ-1 ಮಹೇಂದ್ರರವರ ತಾಯಿಯಾದ ಪಾರ್ವತಮ್ಮರವರು

Visit **ecourts.gov.in** for updates or download mobile app "**eCourts Services**" from Android or iOS

ರಂಗೇನಹಳ್ಳಿ ಗ್ರಾಮದ ಬಳಿ ಹಾದು ಹೋಗಿರುವ ತರೀಕೆರೆ ಲಕ್ಕವಳ್ಳಿ ರಸ್ತೆಯನ್ನು ದಾಟುತ್ತಿರುವಾಗ, ಆರೋಪಿಯು ಬೈಕ್ ಸಂಖ್ಯೆ ಕೆಎ:04/ಈಯು-3503 ನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಮಾನವ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಪಾರ್ವತಮ್ಮರವರಿಗೆ ಡಿಕ್ಕಿ ಹೊಡೆಸಿ ಅಪಘಾತ ಪಡಿಸಿದ್ದು, ಆದ್ದರಿಂದ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 279 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆ ಎಂದು ಅಭಿಯೋಜನೆಯವರು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಿರುತ್ತಾರೆಯೆ?

2) ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, ಆರೋಪಿಯು ಬೈಕ್ ಸಂಖ್ಯೆ ಕೆಎ:04/ಈಯು-3503 ನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಮಾನವ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಪಾರ್ವತಮ್ಮರವರಿಗೆ ಡಿಕ್ಕಿ ಹೊಡೆಸಿ ಅಪಘಾತ ಪಡಿಸಿದ ಪರಿಣಾಮ ಪಾರ್ವತಮ್ಮರವರು ರಸ್ತೆಯ ಮೇಲೆ ಬಿದ್ದು ಅವರ ತಲೆಗೆ ಕೈಕಾಲುಗಳಿಗೆ ಪೆಟ್ಟು ಬಿದ್ದು ತೀವ್ರ ಸ್ವರೂಪದ ರಕ್ತ ಗಾಯಗಳಾಗಿದ್ದು, ಚಿಕಿತ್ಸೆ ಫಲಕಾರಿಯಾಗದೇ ದಿನಾಂಕ 23.05.2022 ರಂದು ರಾತ್ರಿ 08.10 ಗಂಟೆ ಸಮಯದಲ್ಲಿ ಮೃತಪಟ್ಟಿದ್ದು, ಆದ್ದರಿಂದ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 304(ಎ) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆ ಎಂದು ಅಭಿಯೋಜನೆಯವರು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಿರುತ್ತಾರೆಯೆ?

3) ಹಾಗಿದ್ದರೆ ಯಾವ ಆಜ್ಞೆ?

9. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತವೆ ಃ

ಅಂಶ-1 ಃ ನಕಾರಾತ್ಮಕವಾಗಿ,

ಅಂಶ-2 ಃ ನಕಾರಾತ್ಮಕವಾಗಿ,

ಅಂಶ-3 ಃ ಅಂತಿಮ ಆದೇಶದಂತೆ,

**-ಃ ಕಾ ರ ಣ ಗ ಳು ಃ-**

Visit **ecourts.gov.in** for updates or download mobile app "**eCourts Services**" from Android or iOS

KACM710029702022

10. <u>ಅಂಶ-**1** ಮತ್ತು **2** ಃ</u> ಈ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಹಾಗೂ ಇವುಗಳಿಗೆ ನೀಡುವ ಕಾರಣಗಳು ಒಂದೇ ಆಗಿರುವುದರಿಂದ ಅಂಶಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಇವುಗಳನ್ನು ಒಟ್ಟಿಗೆ ಚರ್ಚಿಸಲಾಗಿರುತ್ತದೆ. ಆರೋಪಿಯ ವಿರುದ್ಧ ಅಭಿಯೋಜನೆಯು ಮಾಡಿರುವ ಆರೋಪಗಳನ್ನು ಸಾಬೀತುಪಡಿಸಲು ಪಿರ್ಯಾದುದಾರರು ಸಾಕ್ಷಿದಾರರಾದ ಚಾಸಾ-1/ ಅಸಾ-1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 23.05.2023 ರಂದು ತನ್ನ ತಾಯಿ ರಂಗೇನಹಳ್ಳಿಯಿಂದ ಸಂತೆ ಮುಗಿಸಿಕೊಂಡು ನಡೆದುಕೊಂಡು ಹೋಗುತ್ತಿದ್ದಾಗ ತಾನು ಅವರ ಜೊತೆ ಸಹ ಇದ್ದು, ತಾನು ಅವರಿಂದ 10 ಅಡಿ ಮುಂದೆ ಮೆಣಸಿನಕಾಯಿ ಚೀಲ ಹಿಡಿದುಕೊಂಡು ಹೋಗುತ್ತಿದ್ದೆ, ಅವರು ತನ್ನ ಹಿಂದೆ ನಡೆದುಕೊಂಡು ಬರುತ್ತಿದ್ದರು, ಹಿಂದಿನಿಂದ ಅಶೋಕ್ ಎಂಬುವವರು ಒಂದು ದ್ವಿಚಕ್ರ ವಾಹನವನ್ನು ಜೋರಾಗಿ ಓಡಿಸಿಕೊಂಡು ಬಂದು ತನ್ನ ತಾಯಿಗೆ ಗುದ್ದಿಸಿದ ಕಾರಣ ಅವರು 10 ಅಡಿ ದೂರಕ್ಕೆ ಉಜ್ಜಿಕೊಂಡು ಹೋಗಿ ಬಿದ್ದಿದ್ದು, ತಕ್ಷಣ ತಾನು ಓಡಿ ಹೋಗಿ ಅವರನ್ನು ನೋಡಿದ್ದು, ಅವರ ತಲೆಗೆ ಬಲವಾದ ಪೆಟ್ಟಾದ ಕಾರಣ ಅಲ್ಲೇ ಇದ್ದ ಕರಾವಳಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆಯನ್ನು ಕೊಡಿಸಿ, ಅಲ್ಲಿಂದ ಶಿವಮೊಗ್ಗದ ಮೆಟ್ರೋ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಅಲ್ಲಿ 6 ದಿನಗಳ ಕಾಲ ಚಿಕಿತ್ಸೆ ನೀಡಿದ್ದು, ಚಿಕಿತ್ಸೆ ಫಲಕಾರಿಯಾಗದೆ ತನ್ನ ತಾಯಿ ಮೃತಪಟ್ಟಿರುತ್ತಾರೆ, ನಂತರ ಅವರ ಮೃತ ದೇಹವನ್ನು ಸರ್ಕಾರಿ ಆಸ್ಪತ್ರೆಗೆ ಕಳುಹಿಸಿ ಶವಪಂಚನಾಮೆ ಜರುಗಿಸಿ ಮನೆಗೆ ಕಳುಹಿಸಿಕೊಟ್ಟಿರುತ್ತಾರೆ, ದಿನಾಂಕ 24.05.2023 ರಂದು ತಾನು ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ, ದೂರನ್ನು ನೀಡಿದ ದಿನವೇ ಪೊಲೀಸರು ಬಂದು ಮಹಜರು ಕ್ರಮವನ್ನು ಸ್ಥಳದಲ್ಲಿ ಜರುಗಿಸಿರುತ್ತಾರೆ, ಆದಾದ ನಂತರ 2 ತಿಂಗಳು ಬಿಟ್ಟು ಪೊಲೀಸರು ಮತ್ತೆ ಮಹಜರು ಕ್ರಮವನ್ನು ಜರುಗಿಸಿರುತ್ತಾರೆ, ತನ್ನ ತಾಯಿ ಮೃತಪಟ್ಟ ನಂತರ ಮತ್ತೊಂದು ದೂರನ್ನು ತಾನು ಪೊಲೀಸರಿಗೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಅಸಾ-1 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು

Visit **ecourts.gov.in** for updates or download mobile app "**eCourts Services**" from Android or iOS

KACM710029702022

ನ್ಯಾಯಾಲಯದ ಅನುಮತಿ ಮೇರೆಗೆ ಪಾಟೀ ಸವಾಲು ಮಾಡಿದ್ದು, ಅಸಾ-1 ರವರು ತಮ್ಮ ಪಾಟೀ ಸವಾಲಿನಲ್ಲಿ ದಿನಾಂಕ 16.05.2022 ರಂದು ತಾನು ಮತ್ತು ತನ್ನ ತಾಯಿ ರಂಗೇನಹಳ್ಳಿಗೆ ಸಂತೆಗೆ ಹೋಗಿ ಸಂತೆ ಮುಗಿಸಿಕೊಂಡು ಬ್ಯಾಗನ್ನು ಹಿಡಿದುಕೊಂಡು ರಸ್ತೆ ದಾಟುತ್ತಿದ್ದು, ತನ್ನ ಹಿಂದೆ ಇದ್ದ ತನ್ನ ತಾಯಿ ರಸ್ತೆ ದಾಟುತ್ತಿದ್ದಾಗ ಸಂಜೆ 05.45 ಗಂಟೆ ಸಮಯದಲ್ಲಿ ಕೆಎ:14/ಇಯು-3503 ಸ್ಪ್ಲೆಂಡರ್ ಬೈಕಿನ ಚಾಲಕ ತರೀಕೆರೆ ಕಡೆಯಿಂದ ಲಕ್ಕವಳ್ಳಿ ಕಡೆಗೆ ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ತನ್ನ ತಾಯಿಗೆ ಡಿಕ್ಕಿ ಪಡಿಸಿದ ಪರಿಣಾಮ ಅವರಿಗೆ ಅಪಘಾತವಾಗಿರುತ್ತದೆ ಎಂದರೆ ಸರಿ, ದಿನಾಂಕ 18.05.2022 ರಂದು ಲಕ್ಕವಳ್ಳಿ ಪೊಲೀಸ್ ಠಾಣೆಗೆ ಹಾಜರಾಗಿ ದೂರು ಸಲ್ಲಿಸಿರುತ್ತೇನೆ ಎಂದರೆ ಸರಿ, ನಂತರ ತನ್ನ ತಾಯಿ ಚಿಕಿತ್ಸೆ ಫಲಕಾರಿಯಾಗದೇ ಮೃತ ಹೊಂದಿದ ನಂತರ ದಿನಾಂಕ 24.05.2022 ರಂದು ಮತ್ತೊಂದು ದೂರನ್ನು ನೀಡಿರುತ್ತೇನೆ ಎಂದರೆ ಸರಿ, ದಿನಾಂಕ 19.05.2022 ರಂದು ಬೆಳಿಗ್ಗೆ 11.00 ರಿಂದ 12.00 ಗಂಟೆಯ ಸಮಯದಲ್ಲಿ ರಂಗೇನಹಳ್ಳಿ ಗ್ರಾಮದಲ್ಲಿ ಹಾದುಹೋಗಿರುವ ಲಕ್ಕವಳ್ಳಿ ರಂಗೇನಹಳ್ಳಿ ರಾಜ್ಯ ಹೆದ್ದಾರಿ ಸಂಖ್ಯೆ 57 ರಲ್ಲಿನ ರಂಗೇನಹಳ್ಳಿಯ ಆನಂದ್ ಟೆಕ್ಸ್‌ಟೈಲ್ಸ್ ರವರ ಮುಂದಿನ ಟಾರು ರಸ್ತೆಯಲ್ಲಿ ಪೊಲೀಸರು ಮಾಡಿದ ಮಹಜರಿಗೆ ತಾನು ಸಹಿ ಮಾಡಿರುತ್ತೇನೆ ಎಂದರೆ ಸರಿ ಎಂದು ನುಡಿದಿರುತ್ತಾರೆ.

11. ಕೃತ್ಯ ನಡೆದ ಸ್ಥಳ ಮಹಜರು ಸಾಕ್ಷಿದಾರರಾದ ಚಾಸಾ-9/ಅಸಾ-2 ಮತ್ತು ಚಾಸಾ-10/ಅಸಾ-3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈಗ್ಗೆ ಸುಮಾರು ಮೂರು ವರ್ಷಗಳ ಹಿಂದೆ ತಾವು ರಂಗೇನಹಳ್ಳಿ ಗ್ರಾಮದಲ್ಲಿ ಸಂಜೆ 04.00 ಗಂಟೆ ಸಮಯದಲ್ಲಿ ಅಪಘಾತವಾದ ವಿಚಾರವಾಗಿ ಪೊಲೀಸರು ಒಂದು ದಾಖಲಾತಿಗೆ ಸಹಿ ಮಾಡಿಸಿಕೊಂಡಿದ್ದು, ಮಹಜರಿನಲ್ಲಿ ಬರೆದಿರುವ ವಿಚಾರ ತಮಗೆ ತಿಳಿದಿರುತ್ತದೆ ಎಂದು ನುಡಿದಿರುತ್ತಾರೆ.

12. ಚಾಸಾ-11/ಅಸಾ-4 ಮತ್ತು ಚಾಸಾ-12/ಅಸಾ-5 ರವರು ವಾಹನ ಅಮಾನತ್ತು ಮಹಜರು ಸಾಕ್ಷಿದಾರರಾಗಿದ್ದು, ಅಸಾ-4 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈಗ್ಗೆ

Visit **ecourts.gov.in** for updates or download mobile app "**eCourts Services**" from Android or iOS

ಸುಮಾರು ಎರಡೂವರೆ  ವರ್ಷಗಳ ಹಿಂದೆ ತಾನು ಲಕ್ಕವಳ್ಳಿ ಪೊಲೀಸ್ ಠಾಣೆಯಲ್ಲಿ ಸ್ಪ್ಲೆಂಡರ್ ಬೈಕ್ ವಾಹನವನ್ನು ಬಿಡುಗಡೆ ಮಾಡುವ ವಿಚಾರವಾಗಿ  ಪೊಲೀಸರ ಕೋರಿಕೆಯ ಮೇರೆಗೆ ಒಂದು ದಾಖಲಾತಿಗೆ ಸಹಿ ಮಾಡಿದ್ದು, ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರಗಳು ತನಗೆ ಗೊತ್ತಿರುವುದಿಲ್ಲ ಹಾಗೂ ತನ್ನ ಸಮಕ್ಷಮದಲ್ಲಿ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಅಸಾ-4 ರವರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪಾಟೀ ಸವಾಲು ಮಾಡಿದ್ದು, ಅಸಾ-4 ರವರು ತಮ್ಮ ಪಾಟೀ ಸವಾಲಿನಲ್ಲಿ ದಿನಾಂಕ 20.05.2022 ರಂದು ಬೆಳಿಗ್ಗೆ 10.00 ರಿಂದ 10.45 ಗಂಟೆಯವರೆಗೆ ಲಕ್ಕವಳ್ಳಿ ಪೊಲೀಸ್ ಠಾಣಾ ಆವರಣದಲ್ಲಿ ಅಪಘಾತದ ವಿಚಾರವಾಗಿ ಪೊಲೀಸರು ಕೆಎ14/ಇಯು-3503 ಬೈಕನ್ನು ಅಮಾನತ್ತು ಮಹಜರು ಮಾಡಿ ತಮ್ಮ ಸಮಕ್ಷಮದಲ್ಲಿ ಅಮಾನತ್ತು ಪಡಿಸಿಕೊಂಡಿರುತ್ತಾರೆಂದರೆ ಸರಿ ಎಂದು ನುಡಿದಿರುತ್ತಾರೆ.

13. ಅಸಾ-5 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈಗ್ಗೆ ಸುಮಾರು 3-4 ವರ್ಷಗಳ ಹಿಂದೆ ತಾನು ಲಕ್ಕವಳ್ಳಿ ಪೊಲೀಸ್ ಠಾಣಾ ಆವರಣದಲ್ಲಿ ಹೀರೋ ಸ್ಪ್ಲೆಂಡರ್ ಬೈಕನ್ನು ಬಿಡಿಸಿಕೊಳ್ಳುವ ಬಗ್ಗೆ ಒಂದು ದಾಖಲಾತಿಗೆ ಸಹಿ ಮಾಡಿರುತ್ತೇನೆ, ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರಗಳು ತನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಅಸಾ-5 ರವರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪಾಟೀ ಸವಾಲು ಮಾಡಿದ್ದು, ಅಸಾ-5 ರವರು ತಮ್ಮ ಪಾಟೀ ಸವಾಲಿನಲ್ಲಿ ದಿನಾಂಕ 20.05.2020 ರಂದು ಬೆಳಿಗ್ಗೆ 10.00 ರಿಂದ 10.45 ಗಂಟೆ ಸಮಯದಲ್ಲಿ ಲಕ್ಕವಳ್ಳಿ ಪೊಲೀಸ್ ಠಾಣಾ ಆವರಣದಲ್ಲಿ ಕೆಎ14/ಇಯು-3503 ಹಿರೋ ಸ್ಪ್ಲೆಂಡರ್ ಪ್ಲಸ್ ಬೈಕು ಅಪಘಾತ ಪಡಿಸಿರುವ ವಿಚಾರವಾಗಿ ಪೊಲೀಸರು ಅಮಾನತ್ತು ಮಹಜರು ಜರುಗಿಸಿ ಸದರಿ ಬೈಕ್ ನ್ನು ತಮ್ಮ

ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತಾರೆಂದರೆ ಬೈಕನ್ನು ಬಿಡಿಸಿಕೊಳ್ಳಲು ಸಹಿ ಮಾಡಿರುತ್ತೇನೆಂದು ನುಡಿದಿರುತ್ತಾರೆ.

14. ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-13/ಅಸಾ-6 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 23.05.2023 ರಂದು ಸೋಮವಾರ ಸಂಜೆ 05.00 ಗಂಟೆಗೆ ರಂಗೇನಹಳ್ಳಿ ಸಂತೆ ಮಾರ್ಕೆಟ್ ನಲ್ಲಿ ಅಪಘಾತವಾಗಿದ್ದನ್ನು ತಾನು ನೋಡಿದ್ದು, ಆರೋಪಿ ತನ್ನ ಬಾಬ್ತು ಬೈಕಿನಿಂದ ಪಾರ್ವತಮ್ಮನವರಿಗೆ ಗುದ್ದಿ ಅಪಘಾತಪಡಿಸಿರುತ್ತಾರೆ, ಪಾರ್ವತಮ್ಮನವರಿಗೆ ತಲೆಗೆ ತೀವ್ರ ತರಹದ ಪೆಟ್ಟಾಗಿರುತ್ತದೆ, ತಾವೇ ಪಾರ್ವತಮ್ಮನವರನ್ನು ಶಿವಮೊಗ್ಗದ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ, ಪಾರ್ವತಮ್ಮನವರು ಕೋಮಕ್ಕೆ ಹೋಗಿದ್ದು, 8 ದಿನಗಳ ನಂತರ ಮೃತಪಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಅಸಾ-6 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪಾಟೀ ಸವಾಲು ಮಾಡಿದ್ದು, ಅಸಾ-6 ರವರು ತಮ್ಮ ಪಾಟೀ ಸವಾಲಿನಲ್ಲಿ ದಿನಾಂಕ 16.05.2022 ರಂದು ಸೋಮವಾರ ರಂಗೇನಹಳ್ಳಿ ಗ್ರಾಮದಲ್ಲಿ ಸಂತೆ ಇದ್ದ ಕಾರಣ ತಾನು ಮತ್ತು ರವಿಕುಮಾರ್ ಸಂತೆಗೆ ಹೋಗಿದ್ದು, ತರೀಕೆರೆ ಕಡೆಯಿಂದ ಆರೋಪಿ ಓಡಿಸುತ್ತಿದ್ದ ಕೆಎ:14/ಇಯು-3503 ಹಿರೋ ಸ್ಪ್ಲೆಂಡರ್ ಪ್ಲಸ್ ಬೈಕು ಅತಿವೇಗ ಹಾಗೂ ಅಜಾಗರೂಕತೆಯಿಂದ ರಸ್ತೆ ದಾಟುತ್ತಿದ್ದ ಪಾರ್ವತಮ್ಮನವರಿಗೆ ಗುದ್ದಿದ ಪರಿಣಾಮ ಪಾರ್ವತಮ್ಮನವರ ತಲೆಗೆ ತೀವ್ರತರಹದ ಪೆಟ್ಟಾಗಿ ಮೈಕೈಗೆ ಪೆಟ್ಟಾಗಿರುತ್ತದೆ ಎಂದರೆ ಸರಿ, ಸದರಿ ಅಪಘಾತಕ್ಕೆ ಆರೋಪಿಯ ನಿರ್ಲಕ್ಷತನವೇ ಕಾರಣ, ಸದರಿ ಘಟನೆಯನ್ನು ತಾನು ತನ್ನ ಕಣ್ಣಾರೆ ಕಂಡಿರುತ್ತೇನೆ ಎಂದು ನುಡಿದಿರುತ್ತಾರೆ.

15. ಪ್ರಕರಣದ ಇನ್ನೋರ್ವ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-14/ಅಸಾ-7 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈಗ್ಗೆ ಸುಮಾರು ಮೂರು ವರ್ಷಗಳ ಹಿಂದೆ ರಂಗೇನಹಳ್ಳಿಯ ಸಂತೆ ಹತ್ತಿರ ಸಂಜೆ 05.30 – 06.00 ಗಂಟೆ ಸಮಯದಲ್ಲಿ ಮುಖ್ಯ

KACM710029702022

ರಸ್ತೆಯಲ್ಲಿ ಸ್ಪೆಂಡರ್ ದ್ವಿಚಕ್ರ ವಾಹನವು ಬಾವಿಕೆರೆ ಕಡೆಯಿಂದ ಬಂದು ಚಾಸಾ-1 ರವರ ತಾಯಿಯಾದ ಪಾರ್ವತಮ್ಮನವರನ್ನು ಗುದ್ದಿದ ಪರಿಣಾಮ ಅವರು ಅಲ್ಲೇ ಜ್ಞಾನ ತಪ್ಪಿ ಬಿದ್ದಿದ್ದು, ಅವರನ್ನು ರಂಗೇನಹಳ್ಳಿಯ ಕರಾವಳಿ ಆಸ್ಪತ್ರೆಗೆ ತೋರಿಸಿ, ನಂತರ ಶಿವಮೊಗ್ಗದ ಮೆಟ್ರೋ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ, ಶಿವಮೊಗ್ಗದ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಪಾರ್ವತಮ್ಮ ಮೃತಪಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಅಸಾ-7 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪಾಟೀ ಸವಾಲು ಮಾಡಿದ್ದು, ಅಸಾ-7 ರವರು ತಮ್ಮ ಪಾಟೀ ಸವಾಲಿನಲ್ಲಿ ದಿನಾಂಕ 16.05.2022 ರಂದು ಸೋಮವಾರ ದಿನದಂದು ರಂಗೇನಹಳ್ಳಿ ಗ್ರಾಮದಲ್ಲಿ ಸಂತೆ ಇದ್ದುದರಿಂದ ನಾನು ಹಾಗೂ ಧರಣೇಶ್ ಸಂತೆಗೆ ಹೋಗಿದ್ದೆವು ಎಂದರೆ ಸರಿ. ಮಹೇಂದ್ರರವರ ತಾಯಿ ಪಾರ್ವತಮ್ಮ ರಸ್ತೆ ದಾಟುತ್ತಿರುವಾಗ ತರೀಕೆರೆ ಕಡೆಯಿಂದ ಬಂದ ಕೆಎ:14/ಇಯು-3503 ಸ್ಪೆಂಡರ್ ಬೈಕ್ ನ ಚಾಲಕ ಅಶೋಕ್ ರವರು ಬೈಕನ್ನು ಅತಿವೇಗ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಪಾರ್ವತಮ್ಮನವರಿಗೆ ಡಿಕ್ಕಿಪಡಿಸಿದ ಪರಿಣಾಮ ಸದರಿ ಅಪಘಾತವಾಗಿರುತ್ತದೆ ಎಂದರೆ ಸರಿ. ಪಾರ್ವತಮ್ಮನವರಿಗೆ ತೀವ್ರ ತರಹದ ಪೆಟ್ಟಾಗಿದ್ದ ಕಾರಣ ಚಿಕಿತ್ಸೆ ಫಲಕಾರಿಯಾಗದೆ ಶಿವಮೊಗ್ಗದ ಆಸ್ಪತ್ರೆಯಲ್ಲಿ ಮೃತಪಟ್ಟಿತ್ತಾರೆಂದರೆ ಸರಿ, ಈ ಘಟನೆಯ ಸಂಬಂಧ ತಾನು ಪೊಲೀಸ್ ಠಾಣೆಯಲ್ಲಿ ಹೇಳಿಕೆ ನೀಡಿರುತ್ತೇನೆಂದರೆ ಸರಿ, ಅಪಘಾತಪಡಿಸಿದ ಆರೋಪಿ ಅಶೋಕನನ್ನು ತಾನು ನೋಡಿರುತ್ತೇನೆ ಎಂದು ನುಡಿದಿರುತ್ತಾರೆ.

16. ಅಪಘಾತಕ್ಕೀಡಾದ ವಾಹನಗಳನ್ನು ತಪಾಸಣೆ ಮಾಡಿ ಐ.ಎಂ.ವಿ. ವರದಿ ನೀಡಿದ ಬಗ್ಗೆ ಸಾಕ್ಷಿದಾರರಾದ ಚಾಸಾ-15/ಅಸಾ-8 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 19.05.2022 ರಂದು ಚಾಸಾ-21 ರವರ ಮನವಿ ಮೇರೆಗೆ ಬೆಳಿಗ್ಗೆ 11.00 ಗಂಟೆಗೆ ಲಕ್ಕವಳ್ಳಿ ಠಾಣಾ ಆವರಣಕ್ಕೆ ಭೇಟಿ ಕೊಟ್ಟು ಕೆಎ:14/ಇಯು-

Visit **ecourts.gov.in** for updates or download mobile app "**eCourts Services**" from Android or iOS

3503 ರ ಮೋಟಾರ್ ಸೈಕಲ್ ವಾಹನವನ್ನು ತಪಾಸಣೆಗೆ ಒಳಪಡಿಸಿದಾಗ ಸದರಿ ವಾಹನದ ಮುಂದಿನ ಎಡಬದಿಯ ಕ್ಲಚ್ ಕೇಬಲ್ ಹೊಲ್ಡಿಂಗ್ ಹೊಡೆದುಹೋಗಿತ್ತು, ತಾನು ಸದರಿ ವಾಹನವನ್ನು ನಿಂತಲ್ಲೇ ಪರೀಕ್ಷೆ ಮಾಡಿದಾಗ ಸದರಿ ವಾಹನದ ಬ್ರೇಕ್ ವ್ಯವಸ್ಥೆ ಸರಿಯಾಗಿದ್ದು, ಸದರಿ ಅಪಘಾತವು ಯಾಂತ್ರಿಕ ದೋಷದಿಂದ ಆಗಿರುವುದಿಲ್ಲ ಎಂಬುದಾಗಿ ವರದಿಯನ್ನು ನಿಪಿ-11 ರಂತೆ ಸಲ್ಲಿರುತ್ತೇನೆ ಎಂದು ನುಡಿದಿರುತ್ತಾರೆ.

17. ಪ್ರಸ್ತುತ ಪ್ರಕರಣವನ್ನು ದಾಖಲು ಮಾಡಿ ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿ, ಭಾಗಶಃ ತನಿಖೆಯನ್ನು ಕೈಗೊಂಡ ಸಾಕ್ಷಿದಾರರಾದ ಚಾಸಾ-19/ಅಸಾ-9 ರವರು ತಮ್ಮ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ ದಿನಾಂಕ 18.05.2022 ರಂದು ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು 01.15 ಗಂಟೆ ಸಮಯದಲ್ಲಿ ಠಾಣಾ ಮೊಕದ್ದಮೆ ಸಂಖ್ಯೆ 39/2022 ರಂತೆ ಪ್ರಕರಣವನ್ನು ಐ.ಪಿ.ಸಿ. ಕಲಂ 279, 337 ರಡಿಯಲ್ಲಿ ದಾಖಲು ಮಾಡಿ, ಪ್ರಥಮ ವರ್ತಮಾನ ವರದಿಯನ್ನು ತಯಾರು ಮಾಡಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ, ದಿನಾಂಕ 19.05.2022 ರಂದು 11.00 ಗಂಟೆ ಸಮಯಕ್ಕೆ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-9 ಮತ್ತು 10 ರವರನ್ನು ಪಂಚರಾಗಿ ಕರೆದುಕೊಂಡು ಅವರ ಸಮಕ್ಷಮ ಕೃತ್ಯ ಸ್ಥಳದಲ್ಲಿ ಮಹಜರು ಕ್ರಮವನ್ನು ಜರುಗಿಸಿ ಕಚ್ಚಾ ನಕ್ಷೆಯನ್ನು ತಯಾರಿಸಿ ಛಾಯಚಿತ್ರವನ್ನು ತೆಗೆಸಿರುತ್ತೇನೆ, ದಿನಾಂಕ 20.05.2022 ರಂದು ಅಪಘಾತ ಮಾಡಿದ ವಾಹನ ಕೆಎ:14/ಇಯು-3503 ಸ್ಪ್ಲೆಂಡರ್ ಬೈಕನ್ನು ಠಾಣಾ ಅವರಣದಲ್ಲಿ ಪಂಚರಾದ ಚಾಸಾ-11 ಮತ್ತು 12 ರವರ ಸಮಕ್ಷಮ ವಾಹನ ಅಮಾನತ್ತು ಮಹಜರು ಕ್ರಮವನ್ನು ಜರುಗಿಸಿ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ ಹಾಗೂ ಛಾಯಾಚಿತ್ರವನ್ನು ತೆಗೆಸಿರುತ್ತೇನೆ, ಮುಂದಿನ ಕ್ರಮಕ್ಕಾಗಿ ಕೇಸಿನ ಕಡತವನ್ನು ಚಾಸಾ-20 ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ.

Visit **ecourts.gov.in** for updates or download mobile app "**eCourts Services**" from Android or iOS

18. ಪ್ರಕರಣದ ಭಾಗಶಃ ತನಿಖೆಯನ್ನು ಕೈಗೊಂಡು ದೋಷಾರೋಪಣಾ ಪತ್ರವನ್ನು ಸಲ್ಲಿಸಿದ ತನಿಖಾಧಿಕಾರಿಗಳಾದ ಚಾಸಾ-21/ಅಸಾ-10 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 25.05.2022 ರಂದು ಈ ಪ್ರಕರಣದ ಕಡತವನ್ನು ಚಾಸಾ-20 ರವರಿಂದ ಪಡೆದುಕೊಂಡು ಪರಿಶೀಲಿಸಿ, ದಿನಾಂಕ 05.06.2022 ರಂದು ಅಪಘಾತಪಡಿಸಿದ ವಾಹನ ಸಂಖ್ಯೆ ಇವಿಃ3503 ಬೈಕಿನ ಐ.ಎಂ.ವಿ. ವರದಿಯನ್ನು ಚಾಸಾ-15 ರವರಿಂದ ಪಡೆದುಕೊಂಡಿರುತ್ತೇನೆ, ದಿನಾಂಕ 15.06.2022 ರಂದು ಸಾಕ್ಷಿದಾರರಾದ ಚಾಸಾ-13 ಮತ್ತು 14 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ, ದಿನಾಂಕ 27.06.2022 ರಂದು ಮೆಗ್ಗಾನ್ ಆಸ್ಪತ್ರೆಯಿಂದ ಅಪಘಾತದಲ್ಲಿ ಮೃತಪಟ್ಟ ಪಾರ್ವತಮ್ಮನವರ ಪಿ.ಎಂ. ವರದಿಯನ್ನು ಪಡೆದುಕೊಂಡಿರುತ್ತೇನೆ, ಅದೇ ದಿನ ತನಿಖೆಯನ್ನು ಮುಕ್ತಾಯಗೊಳಿಸಿ ಆರೋಪಿಯ ಮೇಲೆ ಆರೋಪ ಸಾಬೀತಾದ ಕಾರಣ ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ.

19. ಈ ಪ್ರಕರಣದಲ್ಲಿ ಅಭಿಯೋಜನೆಯು ಹಾಜರುಪಡಿಸಿರುವ ಎಲ್ಲಾ ಮೌಖಿಕ ಹಾಗೂ ದಾಖಲಾತಿ ದಾಸ್ತಾವೇಜು ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಅಸಾ-1 ರವರು ಈ ಪ್ರಕರಣದಲ್ಲಿ ಪಿರ್ಯಾದುದಾರರು ಆಗಿದ್ದು, ತಮ್ಮ ಸಾಕ್ಷ್ಯದಲ್ಲಿ ದಿನಾಂಕ 23.05.2023 ರಂದು ತನ್ನ ತಾಯಿ ರಂಗೇನಹಳ್ಳಿಯಿಂದ ಸಂತೆ ಮುಗಿಸಿಕೊಂಡು ನಡೆದುಕೊಂಡು ಹೋಗುತ್ತಿದ್ದು, ಅವರ ಜೊತೆ ತಾನು ಸಹ ಇದ್ದು, ಅವರು ತನ್ನ ಹಿಂದೆ ನಡೆದುಕೊಂಡು ಬರುತ್ತಿದ್ದರು, ಹಿಂದಿನಿಂದ ಅಶೋಕ್ ಎಂಬುವವರು ಒಂದು ದ್ವಿಚಕ್ರ ವಾಹನವನ್ನು ಜೋರಾಗಿ ಓಡಿಸಿಕೊಂಡು ಬಂದು ತನ್ನ ತಾಯಿಗೆ ಗುದ್ದಿಸಿದ ಕಾರಣ ಅವರು 10 ಅಡಿ ದೂರಕ್ಕೆ ಉಜ್ಜಿಕೊಂಡು ಹೋಗಿ ಬಿದ್ದಿದ್ದು, ಅವರ ತಲೆಗೆ ಬಲವಾದ ಪೆಟ್ಟಾದ ಕಾರಣ ಅಲ್ಲೇ ಇದ್ದ ಕರಾವಳಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆಯನ್ನು ಕೊಡಿಸಿ, ಅಲ್ಲಿಂದ ಶಿವಮೊಗ್ಗದ ಮೆಟ್ರೋ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಲ್ಲಿ 6 ದಿನಗಳ ಕಾಲ ಚಿಕಿತ್ಸೆ

Visit **ecourts.gov.in** for updates or download mobile app "**eCourts Services**" from Android or iOS

ನೀಡಿದ್ದು, ಚಿಕಿತ್ಸೆ ಫಲಕಾರಿಯಾಗದೆ ತನ್ನ ತಾಯಿ ಮೃತಪಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿಯವರ ಸಾಕ್ಷ್ಯವನ್ನು ಗಮನಿಸಿದಾಗ ಅಸಾ-1 ರವರು ರಸ್ತೆಯನ್ನು ದಾಟಿದ್ದು ತನ್ನ ಹಿಂದೆ ಬರುತ್ತಿದ್ದ ತಾಯಿಯನ್ನು ಗಮನಿಸದೇ ಇರುವುದು ಕಂಡುಬರುತ್ತದೆ ಮತ್ತು ಸದರಿ ಅಪಘಾತವನ್ನು ತಾನು ಕಣ್ಣಾರೆ ನೋಡಿಲ್ಲದೆ ಇರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದ್ದರಿಂದ ಸದರಿಯವರ ಸಾಕ್ಷ್ಯವು ಅಭಿಯೋಜನೆಯ ಪ್ರಕರಣಕ್ಕೆ ಪ್ರಯೋಜನಕರ ಸಾಕ್ಷ್ಯವಾಗಿರುವುದಿಲ್ಲ.

20. ಅಸಾ-6 ಮತ್ತು 7 ರವರು ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಅಸಾ-6 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 23.05.2023 ರಂದು ಸೋಮವಾರ ಸಂಜೆ 05.00 ಗಂಟೆಗೆ ರಂಗೇನಹಳ್ಳಿ ಸಂತೆ ಮಾರ್ಕೆಟ್ ನಲ್ಲಿ ಅಪಘಾತವಾಗಿದ್ದನ್ನು ತಾನು ನೋಡಿದ್ದು, ಆರೋಪಿ ತನ್ನ ಬಾಬ್ತು ಬೈಕಿನಿಂದ ಪಾರ್ವತಮ್ಮನವರಿಗೆ ಗುದ್ದಿ ಅಪಘಾತ ಪಡಿಸಿರುತ್ತಾರೆ, ಪಾರ್ವತಮ್ಮನವರಿಗೆ ತಲೆಗೆ ತೀವ್ರ ತರಹದ ಪೆಟ್ಟಾಗಿರುತ್ತದೆ, ತಾವೇ ಪಾರ್ವತಮ್ಮನವರನ್ನು ಶಿವಮೊಗ್ಗದ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ ಎಂದು ನುಡಿದಿದ್ದು, ನಂತರ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ ಅಪಘಾತ ನಡೆಯಿತು ಎಂದು ಹೇಳಲಾದ ದಿನ ರಂಗೇನಹಳ್ಳಿ ಗ್ರಾಮದ ಸಂತೆಯಲ್ಲಿ ಬಹಳ ಜನ ಇದ್ದ ಕಾರಣ ಯಾವುದೇ ವಾಹನ ವೇಗವಾಗಿ ಹೋಗಲು ಸಾಧ್ಯವಿಲ್ಲ ಎಂದರೆ ಸರಿ, ಆರೋಪಿಯು ವಾಹನವನ್ನು ನಿಧಾನವಾಗಿ ಚಲಾಯಿಸುತ್ತಿದ್ದರು ಎಂದರೆ ಸರಿ, ಪಾರ್ವತಮ್ಮನವರು ರಸ್ತೆಗೆ ಅಚಾನಕ್ಕಾಗಿ ಬಂದರು ಎಂದರೆ ಸರಿ, ಆರೋಪಿಯ ವಾಹನಕ್ಕೆ ಪಾರ್ವತಮ್ಮ ಅಚಾನಕ್ಕಾಗಿ ಸಿಕ್ಕಿ ಆರೋಪಿ ವಾಹನ ನಿಂತಿದ್ದ ಜಾಗದಲ್ಲೇ ಬಿದ್ದಿರುತ್ತಾರೆಂದರೆ ಸರಿ, ಆರೋಪಿಯು ವಾಹನವನ್ನು ವೇಗವಾಗಿ ಚಲಾಯಿಸಿರುವುದಿಲ್ಲ, ಪಾರ್ವತಮ್ಮನವರ ನಿರ್ಲಕ್ಷತನದಿಂದಲೇ ಸದರಿ ಅಪಘಾತ ಸಂಭವಿಸಿರುತ್ತದೆ ಎಂದರೆ ಸರಿ ಎಂದು ನುಡಿದಿರುತ್ತಾರೆ. ಅಸಾ-6 ರವರ ಮುಖ್ಯ ವಿಚಾರಣೆ ಮತ್ತು ಪಾಟೀ ಸವಾಲಿನ

ಅಂಶಗಳನ್ನು ಗಮನಿಸಿದಾಗ ಸದರಿಯವರ ಸಾಕ್ಷ್ಯವು ಅನೇಕ ದ್ವಂದ್ವತೆಗಳಿಂದ ಕೂಡಿದ್ದು ಒಂದಕ್ಕೊಂದು ತಾಳೆಯಾಗದೇ ಇರುವುದು ಕಂಡುಬರುತ್ತದೆ.

21. ಅಸಾ-7 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈಗ್ಗೆ ಸುಮಾರು ಮೂರು ವರ್ಷಗಳ ಹಿಂದೆ ರಂಗೇನಹಳ್ಳಿಯ ಸಂತೆ ಹತ್ತಿರ ಸಂಜೆ 05.30 – 06.00 ಗಂಟೆ ಸಮಯದಲ್ಲಿ ಮುಖ್ಯ ರಸ್ತೆಯಲ್ಲಿ ಸ್ಪೆಂಡರ್ ದ್ವಿಚಕ್ರ ವಾಹನವು ಬಾವಿಕೆರೆ ಕಡೆಯಿಂದ ಬಂದು ಚಾಸಾ-1 ರವರ ತಾಯಿಯಾದ ಪಾರ್ವತಮ್ಮನವರನ್ನು ಗುದ್ದಿದ ಪರಿಣಾಮ ಅವರು ಅಲ್ಲೇ ಜ್ಞಾನ ತಪ್ಪಿ ಬಿದ್ದಿದ್ದು, ಅವರನ್ನು ರಂಗೇನಹಳ್ಳಿಯ ಕರಾವಳಿ ಆಸ್ಪತ್ರೆಗೆ ತೋರಿಸಿ, ನಂತರ ಶಿವಮೊಗ್ಗದ ಮೆಟ್ರೋ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿದಿರುತ್ತಾರೆ, ನಂತರ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ ಆ ದಿನ ಸಂತೆ ಇದ್ದು ರಸ್ತೆಯಲ್ಲಿ ಬಹಳ ಜನ ಓಡಾಡುತ್ತಿರುವ ಕಾರಣ ವಾಹನಗಳು ವೇಗವಾಗಿ ಚಲಾಯಿಸಲು ಸಾಧ್ಯವಿಲ್ಲ ಎಂದರೆ ಸರಿ, ಚಾಸಾ-1 ರವರು ರಸ್ತೆಯನ್ನು ದಾಟಿದ್ದರು ಎಂದರೆ ಸರಿ, ಅವರ ತಾಯಿ ರಸ್ತೆ ದಾಟಿರುವುದಿಲ್ಲ, ಮಗ ದಾಟಿದ್ದಾನೆಂದು ಅಚಾನಕ್ಕಾಗಿ ರಸ್ತೆಯ ಎಡಭಾಗದಿಂದ ಬಲಭಾಗಕ್ಕೆ ರಸ್ತೆ ದಾಟಲು ಹೋಗಿರುತ್ತಾರೆಂದರೆ ಸರಿ, ಆರೋಪಿಯ ವಾಹನವು ಎಡಭಾಗದಲ್ಲಿತ್ತು ಎಂದರೆ ಬಲಭಾಗದಲ್ಲಿ ಇತ್ತು ಎಂದು ನುಡಿದಿರುತ್ತಾರೆ. ಅಸಾ-6 ಮತ್ತು 7 ರವರ ಸಾಕ್ಷ್ಯವನ್ನು ಗಮನಿಸಿದಾಗ ಚಾಸಾ-1 ರವರ ತಾಯಿಯಾದ ಮೃತ ಪಾರ್ವತಮ್ಮರವರು ರಸ್ತೆಯನ್ನು ದಾಟಲು ಅಚಾನಕ್ಕಾಗಿ ರಸ್ತೆಗೆ ಬಂದಿರುತ್ತಾರೆ ಎಂಬುದು ಕಂಡುಬರುತ್ತದೆ ಮತ್ತು ಸದರಿಯವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯ ಅತಿವೇಗ ಮತ್ತು ನಿರ್ಲಕ್ಷತನದಿಂದ ಸದರಿ ಅಪಘಾತವಾಗಿರುತ್ತದೆ ಎಂದು ಸ್ಪಷ್ಟವಾಗಿ ನುಡಿದಿರುವುದಿಲ್ಲ ಮತ್ತು ನಿಪಿ-3 ರ ಮಹಜರನ್ನು ಗಮನಿಸಿದಾಗ ದ್ವಿಚಕ್ರ ವಾಹನವು ರಸ್ತೆಯ ಎಡಭಾಗದಲ್ಲಿ ಬರುತ್ತಿದ್ದ ಬಗ್ಗೆ ನಕ್ಷೆಯಲ್ಲಿ ಕಂಡುಬಂದಿದ್ದು, ಆದರೆ ವಾಹನವು ಬಲಭಾಗದಲ್ಲಿ ಇತ್ತು ಎಂದು ಅಸಾ-7 ರವರು ನುಡಿದಿರುತ್ತಾರೆ. ಸದರಿ ಅಂಶವನ್ನು ಗಮನಿಸಿದಾಗ ಅಸಾ-7 ರವರು ಸದರಿ ಅಪಘಾತವನ್ನು ನೋಡಿರುವ ಬಗ್ಗೆ

Visit **ecourts.gov.in** for updates or download mobile app "**eCourts Services**" from Android or iOS

ಸಂಶಯವುಂಟಾಗುತ್ತದೆ. ಅಸಾ-6 ಮತ್ತು 7 ರವರ ಸಾಕ್ಷ್ಯವು ಅನೇಕ ದ್ವಂದ್ವತೆಗಳಿಂದ ಕೂಡಿದ್ದು, ಸದರಿಯವರ ಸಾಕ್ಷ್ಯದಿಂದ ಆರೋಪಿಯ ಅತಿವೇಗ ಮತ್ತು ನಿರ್ಲಕ್ಷತನದಿಂದ ಸದರಿ ಅಪಘಾತವಾಗಿರುತ್ತದೆ ಎಂದು ಸಂದೇಹತೀತವಾಗಿ ರುಜುವಾತು ಪಡಿಸುವಲ್ಲಿ ಅಭಿಯೋಜನೆಯವರು ವಿಫಲರಾಗಿರುತ್ತಾರೆ ಎಂದು ಈ ನ್ಯಾಯಾಲಯವು ಅಭಿಪ್ರಾಯ ಪಡುತ್ತದೆ.

22. ಅಸಾ-2 ಮತ್ತು 3 ರವರು ಈ ಪ್ರಕರಣದ ನಿಪಿ-2 ರ ಸ್ಥಳ ಮಹಜರು ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ರಂಗೇನಹಳ್ಳಿ ಗ್ರಾಮದಲ್ಲಿ ಅಪಘಾತವಾದ ವಿಚಾರವಾಗಿ ಪೊಲೀಸರು ಒಂದು ದಾಖಲಾತಿಗೆ ಸಹಿ ಮಾಡಿಸಿಕೊಂಡಿದ್ದು, ಮಹಜರಿನಲ್ಲಿ ಬರೆದಿರುವ ವಿಚಾರ ತಮಗೆ ತಿಳಿದಿರುತ್ತದೆ ಎಂದು ನುಡಿದಿರುತ್ತಾರೆ, ಆದರೆ ಅಸಾ-2 ರವರು ಪೊಲೀಸರು ಮಹಜರನ್ನು ಮಧ್ಯಾಹ್ನ ಮಾಡಿರುತ್ತಾರೆ ಎಂದು ನುಡಿದಿದ್ದು, ಅಸಾ-3 ರವರು ಸಂಜೆ 04.00 ಗಂಟೆ ಸಮಯದಲ್ಲಿ ಪೊಲೀಸರು ಮಹಜರು ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಅಸಾ-2 ರವರು ತಮ್ಮ ಪಾಟೀ ಸವಾಲಿನಲ್ಲಿ ಅಪಘಾತವು ರಸ್ತೆಯ ಎಡ ಭಾಗದಲ್ಲಿ ಆಗಿರುತ್ತದೆ ಎಂದರೆ ತನಗೆ ಗೊತ್ತಿಲ್ಲ ಎಂದು ನುಡಿದು, ಮುಂದುವರೆದು ರಸ್ತೆಯ ಮಧ್ಯದಲ್ಲಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಅಸಾ-2 ಮತ್ತು 3 ರವರ ಸಾಕ್ಷ್ಯವನ್ನು ಗಮನಿಸಿದಾಗ ಸದರಿಯವರಿಗೆ ಅಪಘಾತದ ಬಗ್ಗೆ ಯಾವುದೇ ಮಾಹಿತಿ ಸ್ಪಷ್ಟವಾಗಿ ತಿಳಿಯದೇ ಇರುವುದು ಹಾಗೂ ಪೊಲೀಸರ ಕೋರಿಕೆಯ ಮೇರೆಗೆ ನಿಪಿ-3 ಮಹಜರಿಗೆ ಸಹಿ ಮಾಡಿರುವುದು ಕಂಡುಬಂದಿದ್ದು, ಆದ್ದರಿಂದ ನಿಪಿ-3 ರ ಮಹಜರನ್ನು ನಿಸ್ಸಂಶಾಯತೀತವಾಗಿ ರುಜುವಾತು ಪಡಿಸುವಲ್ಲಿ ಅಭಿಯೋಜನೆಯವರು ವಿಫಲರಾಗಿರುತ್ತಾರೆ ಎಂದು ಈ ನ್ಯಾಯಾಲಯವು ಅಭಿಪ್ರಾಯ ಪಡುತ್ತದೆ.

23. ಅಸಾ-4 ಮತ್ತು 5 ರವರು ವಾಹನ ಅಮಾನತ್ತು ಮಹಜರು ಸಾಕ್ಷಿದಾರರಾಗಿದ್ದು, ತಮ್ಮ ಸಾಕ್ಷ್ಯದಲ್ಲಿ ತಾವು ಲಕ್ಕವಳ್ಳಿ ಪೊಲೀಸ್ ಠಾಣೆಯಲ್ಲಿ ಸ್ಪೆಂಡರ್ ಬೈಕ್ ವಾಹನವನ್ನು ಬಿಡುಗಡೆ ಮಾಡುವ ವಿಚಾರವಾಗಿ ಪೊಲೀಸರ ಕೋರಿಕೆಯ

Visit **ecourts.gov.in** for updates or download mobile app "**eCourts Services**" from Android or iOS

ಮೇರೆಗೆ ಒಂದು ದಾಖಲಾತಿಗೆ ಸಹಿ ಮಾಡಿರುತ್ತೇವೆ, ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರಗಳು ತಮಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಅಸಾ-4 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ ತನ್ನ ಸಮಕ್ಷಮದಲ್ಲಿ ಪೊಲೀಸರು ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದು ನುಡಿದಿದ್ದು, ಅಸಾ-4 ರವರು ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ ಮಹಜರಿನಲ್ಲಿ ಬರೆದಿರುವ ವಿಚಾರ ತನಗೆ ತಿಳಿದಿರುವುದಿಲ್ಲ, ಪೊಲೀಸರು ತನಗೆ ಓದಿ ಹೇಳಿರುವುದಿಲ್ಲ, ವಾಹನವನ್ನು ವಶಪಡಿಸಿಕೊಳ್ಳುತ್ತಿದ್ದೇವೆ ಎಂದು ತನ್ನ ಹತ್ತಿರ ಸಹಿ ಮಾಡಿಸಿ ಕೊಂಡಿರುತ್ತಾರೆ, ಬೇರೆ ಯಾವುದೇ ವಿಚಾರ ತನಗೆ ತಿಳಿದಿರುವುದಿಲ್ಲ ಎಂದು ನುಡಿದಿರುತ್ತಾರೆ. ಅಸಾ-5 ರವರು ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ ಅಮಾನತ್ತು ಮಹಜರನ್ನು ಪೊಲೀಸರು ಓದಿ ತಿಳಿಸಿರುವುದಿಲ್ಲ, ಅಪಘಾತವಾದ ಸ್ಥಳದಲ್ಲಿ ತಾನು ಇರಲಿಲ್ಲ, ಬೈಕನ್ನು ಬಿಡಿಸುವ ವಿಚಾರವಾಗಿ ಸಹಿ ಮಾಡಿರುತ್ತೇನೆ, ತನಗೆ ಯಾವುದೇ ವಿಚಾರ ತಿಳಿದಿರುವುದಿಲ್ಲ ಎಂದು ನುಡಿದಿರುತ್ತಾರೆ. ಅಸಾ-4 ಮತ್ತು 5 ರವರ ಸಾಕ್ಷ್ಯವನ್ನು ಗಮನಿಸಿದಾಗ ಸದರಿಯವರ ಸಾಕ್ಷ್ಯವು ಒಂದಕ್ಕೊಂಡು ತಾಳೆಯಾಗುವುದಿಲ್ಲ ಮತ್ತು ಅನೇಕ ದ್ವಂದ್ವತೆಗಳಿಂದ ಕೂಡಿರುತ್ತದೆ. ಸದರಿಯವರು ವಾಹನ ಬಿಡುಗಡೆಗಾಗಿ ಸಹಿ ಮಾಡಿರುತ್ತೇವೆ ಎಂದು ನುಡಿದಿರುವುದನ್ನು ಗಮನಿಸಿದಾಗ ಸದರಿಯವರಿಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿರುವುದು ಕಂಡುಬರುತ್ತದೆ. ಆದ್ದರಿಂದ ಸದರಿಯವರ ಸಾಕ್ಷ್ಯವು ಅಭಿಯೋಜನೆಗೆ ಪ್ರಯೋಜನಕರ ಸಾಕ್ಷ್ಯವಾಗಿರುವುದಿಲ್ಲ.

24. ಅಸಾ-8 ರವರು ವಾಹನ ನಿರೀಕ್ಷಕರಾಗಿದ್ದು ಅಪಘಾತ ಪಡಿಸಿದೆ ಎನ್ನಲಾದ ವಾಹನವನ್ನು ಪರಿಶೀಲಿಸಿ ನಿಪಿ-11 ರಂತೆ ವರದಿಯನ್ನು ನೀಡಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಅಸಾ-9 ರವರು ಈ ಪ್ರಕರಣದಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ಭಾಗಶಃ ತನಿಖೆಯನ್ನು ಕೈಗೊಂಡ ಬಗ್ಗೆ ಹಾಗೂ ಅಸಾ-10 ಈ ಪ್ರಕರಣದಲ್ಲಿ ತನಿಖೆಯನ್ನು ಕೈಗೊಂಡು ದೋಷಾರೋಪಣಾ ಪತ್ರವನ್ನು ಸಲ್ಲಿಸಿದ ಬಗ್ಗೆ ಸಾಕ್ಷ್ಯ

Visit **ecourts.gov.in** for updates or download mobile app "**eCourts Services**" from Android or iOS

ನುಡಿದಿದ್ದು, ಆದರೆ ಅಸಾ-1, 6 ಮತ್ತು 7 ರವರ ಸಾಕ್ಷ್ಯದಿಂದ ಹಾಗೂ ಮೇಲೆ ಚರ್ಚಿಸಿದ ಕಾರಣಗಳಿಂದಾಗಿ ಈ ಪ್ರಕರಣದಲ್ಲಿ ಆರೋಪಿಸಿದಂತೆ ಆರೋಪಿಯ ಅತಿವೇಗ ಮತ್ತು ಅಜಾಗರೂಕತೆಯಿಂದ ಅಪಘಾತವಾಗಿರುತ್ತದೆ ಎಂಬುದರ ಬಗ್ಗೆ ತೀರ್ಮಾನಕ್ಕೆ ಬರಲಾಗುವುದಿಲ್ಲ. ಅಭಿಯೋಜನೆಯು ಹಾಜರುಪಡಿಸಿರುವ ಎಲ್ಲಾ ಮೌಖಿಕ ಹಾಗೂ ದಾಖಲಾತಿ ದಸ್ತಾವೇಜು ಸಾಕ್ಷ್ಯಾಧಾರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಅಭಿಯೋಜನೆಯು ಭಾರತೀಯ ದಂಡ ಸಂಹಿತೆ ಕಲಂ 279 ರ ಘಟಕಾಂಶಗಳನ್ನು ಸಂಶಯಾತೀತವಾಗಿ ರುಜುವಾತು ಪಡಿಸಲು ವಿಫಲರಾಗಿರುತ್ತಾರೆ. ಭಾರತೀಯ ದಂಡ ಸಂಹಿತೆ ಕಲಂ 279 ರ ಘಟಕಾಂಶಗಳನ್ನು ಅಭಿಯೋಜನೆಯು ರುಜುವಾತು ಪಡಿಸದಿದ್ದಲ್ಲಿ ಭಾರತೀಯ ದಂಡ ಸಂಹಿತೆ ಕಲಂ 304(ಎ) ರ ಘಟಕಾಂಶಗಳು ಅನ್ವಯವಾಗುವುದಿಲ್ಲ.

25. ಈ ಮೇಲ್ಕಂಡ ಎಲ್ಲಾ ಸಾಕ್ಷ್ಯಾಧಾರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಅಭಿಯೋಜನೆಯು ಆರೋಪಿಯ ವಿರುದ್ಧ ಆರೋಪಿಸಿದ ಭಾರತೀಯ ದಂಡ ಸಂಹಿತೆ ಕಲಂ ಭಾರತೀಯ ದಂಡ ಸಂಹಿತೆ ಕಲಂ 279 ಮತ್ತು 304(ಎ) ರಡಿಯಲ್ಲಿನ ಒಳಾಂಶಗಳನ್ನು ನಿಸ್ಸಂಶಯತೀತವಾಗಿ ಸಾಬೀತುಪಡಿಸಲು ವಿಫಲವಾಗಿರುತ್ತಾರೆ. ಆದ್ದರಿಂದ ಸಂಶಯದ ಲಾಭವನ್ನು ಆರೋಪಿಗೆ ನೀಡಿ ಆರೋಪಿಯು ಬಿಡುಗಡೆಗೆ ಅರ್ಹರೆಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟು, ಅಂಶ-1 ಮತ್ತು 2 ನ್ನು ನಕಾರಾತ್ಮಕ ಎಂದು ಉತ್ತರಿಸಿರುತ್ತೇನೆ.

26. ಅಂಶ - **3** ಃ ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ ಃ

-ಃ ಆದೇಶ ಃ-

ದಂಡ ಪ್ರಕ್ರಿಯಾ ಸಂಹಿತೆ ಕಲಂ 255(1) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿಯನ್ನು ಭಾರತೀಯ ದಂಡ ಸಂಹಿತೆ

Visit **ecourts.gov.in** for updates or download mobile app "**eCourts Services**" from Android or iOS

KACM710029702022

ಕಲಂ 279 ಮತ್ತು 304(ಎ) ರಡಿಯಲ್ಲಿನ ಆರೋಪಗಳಿಂದ ದೋಷಮುಕ್ತಗೊಳಿಸಲಾಗಿದೆ.

ಆರೋಪಿಯ ವೈಯುಕ್ತಿಕ ಬಾಂಡ್ ಹಾಗೂ ಜಾಮೀನು ಬಾಂಡ್ ಈ ಆದೇಶವಾದ ದಿನದಿಂದ ರದ್ದುಗೊಳಿಸಲಾಗಿದೆ.

ಆರೋಪಿಯು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರಡಿಯಲ್ಲಿ ಸಲ್ಲಿಸಿದ ವೈಯುಕ್ತಿಕ ಬಾಂಡ್ ಹಾಗೂ ಜಾಮೀನು ಬಾಂಡ್ ಈ ಆದೇಶವಾದ ದಿನದಿಂದ ಆರು ತಿಂಗಳವರೆಗೆ ಊರ್ಜಿತವಾಗಿರುತ್ತದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೂಲಕ ನೇರ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ, ಓದಿ ತಿದ್ದುಪಡಿ ಮಾಡಿ, ತೆರೆದ ನ್ಯಾಯಾಲಯದಲ್ಲಿ ದಿನಾಂಕ 15 ನೇ ಮೇ 2026 ರಂದು ಘೋಷಿಸಲಾಯಿತು)

URMILA V

Digitally signed by URMILA V
Date: 2026.05.15 17:14:39 +0530

ಸಹಿ
**(ಊರ್ಮಿಳ.ವಿ.)**
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

ಅನುಬಂಧ

ಅಭಿಯೋಜನೆಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ ಃ-

| | | |
|---|---|---|
| ಅಸಾ-1 | ಃ | ಮಹೇಂದ್ರ |
| ಅಸಾ-2 | ಃ | ಕೃಷ್ಣಮೂರ್ತಿ |
| ಅಸಾ-3 | ಃ | ಪರಮೇಶ್ವರಪ್ಪ |
| ಅಸಾ-4 | ಃ | ಸುಬ್ರಮಣ್ಯ |
| ಅಸಾ-5 | ಃ | ಕೆ.ಮಂಜು |
| ಅಸಾ-6 | ಃ | ಧರಣೇಶ್ |
| ಅಸಾ-7 | ಃ | ರವಿಕುಮಾರ್ |
| ಅಸಾ-8 | ಃ | ಎನ್.ಈಶ್ವರ್ |
| ಅಸಾ-9 | ಃ | ಬಿ.ಎಲ್.ಸುರೇಶ್ |
| ಅಸಾ-10 | ಃ | ಹೆಚ್.ಎಸ್.ಸುರೇಶ್ |

Visit **ecourts.gov.in** for updates or download mobile app "**eCourts Services**" from Android or iOS

<u>ಅಭಿಯೋಜನೆಯ ಪರ ಗುರುತು ಮಾಡಲ್ಪಟ್ಟ ದಾಖಲಾತಿಗಳು ಃ-</u>

| | | |
|---|---|---|
| ನಿಪಿ-1 | ಃ | ದಿನಾಂಕ 18.05.2022 ರಂದು ನೀಡಿದ ದೂರು |
| ನಿಪಿ-2 | ಃ | ದಿನಾಂಕ 24.05.2022 ರಂದು ನೀಡಿದ ದೂರು |
| ನಿಪಿ-3 | ಃ | ಸ್ಥಳ ಮಹಜರು |
| ನಿಪಿ-4, 5 | ಃ | ಛಾಯಚಿತ್ರಗಳು |
| ನಿಪಿ-6 | ಃ | ಶವ ತನಿಖಾ ವರದಿ |
| ನಿಪಿ-7 | ಃ | ಶವ ಪರೀಕ್ಷಾ ವರದಿ |
| ನಿಪಿ-8 | ಃ | ಸಾಕ್ಷಿದಾರರ ಹೇಳಿಕೆಗಳು |
| ನಿಪಿ-9 | ಃ | ಅಮಾನತ್ತು ಮಹಜರು |
| ನಿಪಿ-10 | ಃ | ಛಾಯಚಿತ್ರ |
| ನಿಪಿ-11 | ಃ | ಮೋಟಾರು ವಾಹನ ಅಪಘಾತ ತಪಾಸಣಾ ವರದಿ |
| ನಿಪಿ-12 | ಃ | ಪ್ರಥಮ ವರ್ತಮಾನ ವರದಿ |

<u>ಅಭಿಯೋಜನೆಯ ಪರ ಗುರುತು ಮಾಡಲ್ಪಟ್ಟ ಮುದ್ದೆಮಾಲುಗಳು ಃ-</u>

- ಇಲ್ಲ -

<u>ಆರೋಪಿ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ ಃ-</u>

- ಇಲ್ಲ -

<u>ಆರೋಪಿ ಪರ ಗುರುತು ಮಾಡಲ್ಪಟ್ಟ ದಾಖಲಾತಿಗಳು ಃ-</u>

- ಇಲ್ಲ -

URMILA V
Digitally signed by URMILA V
Date: 2026.05.15 17:14:32 +0530

ಸಹಿ
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

Visit **ecourts.gov.in** for updates or download mobile app "**eCourts Services**" from Android or iOS